Regd No. M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 45 | ವಂಗಳವಾರ 25-11-47 | ಬಿಡಿ ಪ್ರತಿ 3 ಪೈ

ಜುನಘಡದಲ್ಲಿ ಕೊಲ್ಲು ಆಜ್ಞೆ !

ಗಲ್ಲಿಗಸ್ತು

.... ರಾಜಬೀದೀಲಿ ಹೋಗ್ಲಿ, ಗಲ್ಲೀಲಿ ಆಲೆದು ಬರ್ಲಿ ಎಲ್ಲೆಲೂ ಕುಸಬಲಕ್ಕೆ ಬೇಯಿಸುವ ಗಬ್ಬು ನಾತ. ರಾಜಧಾನಿ ನಾಗರೀಕರಿಗೆ ಈ ಅವಸ್ಥೆ ಊಟ ತಪ್ಪುವುದೆಂದೋ ಎಂದು ತಿರುಪತಿ ವೆಂಕಟರಮಣನಿಗೆ ನಿನ್ನೆ ಮೊರೆ ಇಟ್ಟಿ. ವೆಂಕಟರಮಣ ಪ್ರಸನ್ನನಾಗಿ ಅಕಾರ್ಟರಿಗೆ ಶಸ್ತ್ರಪ್ರೇರಿತವಾಡಿ ನನ್ನನ್ನು ಚೆನ್ನಾಗಿ ಸೋಡ್ವೊಳೋ ಬುದ್ಧಿ ಕೊಟ್ಟು ವಾಪಸ್ ಕಳ್ಸಿದಾನೆ.

ಂ ಂ

.... ರೈಲಿಂದ ಬಂದವರ ಖುಷಿಯೋ ಖುಷಿ ! ಲೋಕಪಾವನಿ ಸೇತುವೆ ಸರಿ ಹೋಯ್ತಂತೆ. ಬೆಂಗಳೂರು ವೈಸೂರು ಮಾಮೂಲು ಸಂಚಾರ ಮೊದಲಾಯ್ತಂತೆ. ಗಲ್ಲೀರಾಜ ಇನ್ನು ಸರಾಗವಾಗಿ ಬೆಂಗಳೂರಿಗೆ ಬಂಡಿ ಬಿಟ್ಟು ಗಲ್ಲೀಗಲ್ಲೀ ಗಸ್ತು ಹೊಡ್ದು ನಿಮಗೆ ಸುದ್ದೀ ತರಬಹುದು ಪತ್ರಿಕೆಗೆ ಕಾಗ್ದ ಕಾಣಬಹುದು.

ಂ ಂ

.... ಯಾವೂರ ಗಲ್ಲೀಕಡೆ ಶಿರಗದ್ರೂ ಹಾರ್ಡೀಕರ್ ಓಮ್ಮೆ ಹೇದಗ್ತಾಗೆ ಕೋಟೀನದಗಲ ಪತ್ರಿಕೆಗಳು ಪ್ರಾರಂಭವಾಗಿವೆ. ಚಿತ್ರದುರ್ಗದಲ್ಲೊಂದು ಒಂದು ಪುಲ್ಲೆಹಾಳೆ ದೈನಂದಿನ ! ತುಮಕೂರಿನಲ್ಲೂ ಒಂದಂತೆ ! ವೈಸೂರ್ಲಂತೂ ಕೇಳ್ಲೇ ಬೇಕಿಲ್ಲ. ಬೆಂಗಳೂರಲ್ಲಿ ಎಷ್ಟಾಯ್ತು ! ಇದ್ಯಾಕೋ ಈ ಹುಚ್ಚು!

'ಗಲ್ಲೀರಾಜ'

ರಾಜಕೋಟೆ ನ 24.... ಜುನಗಡದ ಆಡಳಿತಾಧಿಕಾರಿಯು ಅಲ್ಲಿಯ ನ್ಯಾಯಬಾಹಿರ ಜನರನ್ನು ಕೊಲ್ಲುವಂತೆ ಪೋಲೀಸು ಮತ್ತು ಎಲ್ಲಿಟರಿಗೆ ಆಜ್ಞೆ ಕೊಟ್ಟಿದ್ದಾರೆ.

ಂ ಂ

ಬೆಜವಾಡ ನ 24.... ಹೈದರಾಬಾದು ಕಾರ್ಖಾನೆಗಳಲ್ಲಿ ದಿನಕ್ಕೆ 50 ತುಪಾಕಿಗಳು ತಯಾರಾಗುತ್ತಿವೆ ಎಂದು ಹೇಳಲಾಗಿದೆ.

ನವದೆಹಲಿ ನ 24.... ಇಂಡೋ ಪಾಕೆಶಾನ ವಿಷಯ ಮಾತುಕತೆ ನಡೆಸಲು ಬಂದಿರುವ ಅಹ್ವಾನವನ್ನನುಸರಿಸಿ ಪಂಡಿತ ನೆಹರು ಲಂಡನ್ನಿಗೆ ಭೇಟಿಕೊಡುವರೆಂದು ಹೇಳಲಾಗಿದೆ.

ಲಂಡನ್.... ಭೂಮಿಗೆ 315 ವಿಲಿಯ ವರ್ಷ ವಯಸ್ಸಾಗಿದೆಯೆಂದು ವಿಜ್ಞಾನಿಗಳೊಬ್ಬರು ಹೇಳಿಕೆ

ಹೊಸ ಅಧ್ಯಕ್ಷರ ಝೋರು

ಶ್ರೀ ಟಿ. ಸಿದ್ದಲಿಂಗಯ್ಯನವರು ಚಿತ್ರದುರ್ಗದ ಅಧಿವೇಶನದಲ್ಲಿ ಹೊಸದಾಗಿ ಚುನಾಯಿತರಾದ ಕೂತ ದಿನವೇ ವಿದ್ಯಾರ್ಥಿ ಮುಖಂಡರೊಬ್ಬರು ತಾವೇ ತಾವಾಗಿ ವೇದಿಕೆ ಕತ್ತಿ ವೈಕ್‌ಗೆ ವಂಚಿಸಿಟ್ಟು ವಿದ್ಯಾರ್ಥಿಗಳಿ ಪರ ಈ ಹಾರ ಎಂದು ಹೇಳಿ ಅಧ್ಯಕ್ಷರ ಕುತ್ತಿಗೆಗೆ ಹಾಕಹೋದಾಗ ಶ್ರೀ ಸಿದ್ಧಲಿಂಗಯ್ಯನವರು ಆಸನನ್ನು ತಡೆದು ' ಯಾರ ಅನುಮತಿ ಮೇಲೆ ಮೇನಿಕೆ ಹತ್ತಿದ್ದು ಅನ್ನೆನ್ನು ಮಾಡಿದ್ದು ? ಶಿಸ್ತೆಲ್ಲಿ ಹೋಯಿತು ? ಹಾರ ನನಗೆ ಬೇಡ, ಶಿಸ್ತು ಬೇಕು ' ಎಂದು ಗುಡುಗಿ ಆಕ್ಷಣವೆ ಬೇಡಿದ ಮೇಲೆ ಹಾರ ಹಾಕಿಸಿಕೊಂಡರು. ಭಾಷ್ಯ ! ನ್ಯಾಯವಾದ ಝೋರ್

ಹೋಟಲುಗಳೂ ಹರಿಜನರೂ

ಹೋಟಲ್ ಅಂದರೆ ಭೋಜನ ವಿಕ್ರಯ ಶಾಲೆ. ಭೋಜನ ವಿಕ್ರಯ ಶಾಲೆಯು ಮಿಕ್ಕ ಕೆಲವು ವಿಕ್ರಯ ಶಾಲೆಗಳಂತೆಯೇ ಲೈಸನ್ಸು ತೆಗೆದುಕೊಳ್ಳುತ್ತದೆ. ಆ ಲೈಸನ್ಸು ತೆಗೆದುಕೊಳ್ಳುವುದು ಕೆಲವು ಆರೋಗ್ಯ ವಿಧಿಗಳನ್ನು ಅವಲಂಬಿಸಲು. ಅಭಕ್ಷ್ಯ ವಿಕ್ರಯ ಮಾಡತಿರಲು, ಭೋಜನ ವಸತಿಗಳ ವಿನಹಾ ಅಕ್ರಮ ವ್ಯವಹಾರಗಳನ್ನು ಆ ಹೋಟಲಿನಲ್ಲಿ ನಡಿಸಲು ಆಶ್ರಯವನ್ನು ಕೊಡದಿರಲು ಈತ್ಯಾದಿಗಳಿಗಾಗಿ ಆಗಿದೆ. ಅಷ್ಟೇ ಆಗಲಿ ಬಂದವನಿಗೆ ಧರ್ಮಛತ್ರದಂತೆ ಅಡಿಗೆ ಮಾಡಿ ಬಡಿಸಲು ಅಲ್ಲವಷ್ಟೆ !

——ಹೀಗಿರುವಾಗ ಹರಿಜನರಿಗೆ ತಪ್ಪದೆ ಹೋಟಲುಗಳಲ್ಲಿ ಭೋಜನವನ್ನು ಇಡಲೇ ಬೇಕು ಎಂಬ ಶಾಸನವು ಲೋಪವಿರುದ್ಧವು

ಅಂಗಡಿಯವನು ತದಾರ್ಥಗಳನ್ನು ಯಾವನಿಗಾದರೂ ಮಾರಬಹುದು ಮಾರದಿರಬಹುದು. ಹಾಗೆ ಮಾಡಲು ಅವನಿಗೆ ಪೂರ್ಣ ಹಕ್ಕು ಇದೆ. ಯಾವುದಾದರೂ ರೇಹಣ ಪದಾರ್ಥವನ್ನು ಮಾರಲು ಪ್ರತ್ಯೇಕವಾಗಿ ಲೈಸನ್ಸು ಪಡೆದವನು ಅದನ್ನು ಕೆಲವರಿಗೆ ಮಾರುವಿದ್ದಲ್ಲಿ ಅದು ದೋಷವೇ ಸರಿ. ಹಾಗಲ್ಲದೆ ತನ್ನ ಶಕ್ತಿಯನ್ನು ಅನುಸರಿಸಿಕೊಂಡು ಮಾರುವನಿಗೆ ನಿರ್ಬಂಧವೇಕೆ ?

ತನ್ನ ಹೋಟಲಿನಲ್ಲಿ ನುರಾರು ತಿಂಗಳಿಗೆ ಇಷ್ಟು ಮಂದಿ ಊಟ ಮಾಡುವರೆಂದು ಲೆಕ್ಕ ಕೊಟ್ಟು, ಅದನ್ನನುಸರಿಸಿ ಅಕ್ಕಿ ಮೊದಲಾಡ ವೇಷ ಪದಾರ್ಥಗಳನ್ನು ಹೋಟಲಿನವನು ಪರ್ಮಿಟ್ ಮೂಲಕ ಪಡೆಯುತ್ತಾನೆ. ಅದುದರಿಂದ ದಿನಂಪ್ರತಿ ಕೊನೇಪಕ್ಷ ಅಷ್ಟು ಮಂದಿ ಅಥವಾ ತಿಂಗಳಲ್ಲಿ ಅಷ್ಟು ಮಂದಿ ಊಟಮಾಡಿದರೇ, ಇಲ್ಲವೇ, ಪದಾರ್ಥಗಳನ್ನು ಮಿಗಿಸಿ ಬೇರೆ ರೀತಿಯಲ್ಲಿ ಮಾರುತ್ತಿರುವನೇ ಎಂಬ ಪ್ರಶ್ನೆಯಾಗಲೀ, ಯಾಗೆ ಊಟಕ್ಕಿಟ್ಟನೆಂಬ ಕೆಲಸವು ಸರ್ಕಾರಕ್ಕಿಲ್ಲ. ಯಾರಿಗೋ ಇಡಲಿಲ್ಲವೆಂದು ಅಂಥವರನ್ನು ಸರಕಾರವು ಶಿಕ್ಷಿಸುವುದು ನ್ಯಾಯವಲ್ಲ, ರಾಜನೀತಿಯಲ್ಲ, ಸರ್ಕಾರದ ನೀತಿಯಲ್ಲ. ಹಾಗೆ ಮಾಡುವುದರಿಂದ ಯಾವುದೋ ಸಂಘವನ್ನು ಉದ್ಧಾರ ಮಾಡುವೆವೆಂದುಕೊಳ್ಳುವುದು ಶ್ರೇಯಸ್ಕರವಲ್ಲ.

ಹರಿಜನರನ್ನು ಹೋಟಲಿನೊಳಗೆ ಪ್ರವೇಶಗೊಳಿಸಲಿಲ್ಲವೆಂದು ಹೋಟಲು ಮಾಲೀಕರನ್ನು ಶಿಕ್ಷೆಗೆಳೆಸುವದು ಯುಕ್ತ ಕಾರ್ಯವಲ್ಲ. ಹತ್ತು ಮಂದಿ ಕೈಗಳನ್ನೆತ್ತಿ, ಶಾಸನವನ್ನು ಮಾಡಿದ ಮಾಡಿದ ಮಾತ್ರಕ್ಕೇ ಅದಕ್ಕೆ ಶಾಸನದ ಲಕ್ಷಣಗಳು ಬರುವದಿಲ್ಲ. ಮುಸ್ಲಿಮರ ಹೋಟಲು ಅಗಸಾಲಗರ ಹೋಟಲು, ಕ್ಷತ್ರಿಯರ ಹೋಟಲು ಯೂರೋಪಿಯನ್ ರೆಸ್ಟೋರಾಂಟುಗಳು ಎಷ್ಟೋ ಇವೆ ಅವು ಎಲ್ಲವೂ ಕೆಲವು ನಿಯಮಗಳೊಂದಿಗೆಯೇ ಅತಿಥಿಗಳನ್ನು ಬರಮಾಡಿಕೊಳ್ಳುತ್ತವೆ.

ಕೆಲವು ದಿನಗಳ ಹಿಂದೆ ಮದರಾಸಿನಲ್ಲಿ ಒಂದು ಯೂರೋಪಿಯನ್ ಸ್ಟೈಲು ಹೋಟಲಿನಲ್ಲಿ ರಾಷ್ಟ್ರಾಧಿಕಾರಿ ಪದವಿಯಲ್ಲಿದ್ದ ದೊಡ್ಡ ಮನುಷ್ಯನೊಬ್ಬನು ಆ ಹೋಟಲು ನಿಯಮವನ್ನನುಸರಿಸದ ಉಡುಪನ್ನು ಧರಿಸಲಿಲ್ಲವೆಂದು ಆಕ್ಷೇಪಣೆ ಬಂದಿತೆಂದು ಕೇಳಿದ್ದೇವೆ. ಅಮೇರಿಕಾ ಇಂಗ್ಲೆಂಡುಗಳಲ್ಲಿ ಅತಿಥಿಗಳನ್ನು ಸತ್ಕರಿಸುವಕೆಯು, ಕಾನೂನಿನ ಸಮ್ಮತವಾಗಿದೆ. ಶಿಕ್ಷಾರ್ಹವಲ್ಲ ಆದುದರಿಂದ ಹರಿಜನರಿಗೆ ಪ್ರವೇಶ ಕೊಡಲಿಲ್ಲವೆಂದು ಹೋಟಲು ಮಾಲೀಕರನ್ನು ಶಿಕ್ಷಿಸುವದು ಧರ್ಮವೂ ಅಲ್ಲ ನ್ಯಾಯವೂ ಅಲ್ಲ.

[('ತ್ರಿಲಿಂಗ' ದಿಂದ ಸಂಗ್ರಹಿಸಿದ್ದು

1948 ರಲ್ಲಿ ಪಾಕಿಸ್ತಾನವು ಭಾರತಕ್ಕೆ ಸೇರುವುದೆಂದೂ ಚರ್ಚಿಲ್ಲರು ಮತ್ತೆ ಅಧಿಕಾರಕ್ಕೆ ಬರುವುದಿಲ್ಲವೆಂದೂ ಒಬ್ಬ ಸ್ವಸಿದ್ಧ ಜೋತಿಷ್ಯರು ಅಭಿಪ್ರಾಯ ಪಟ್ಟಿದಾರೆ.

ಂ ಂ

ನ್ಯೂ ಆರ್ಲೆತ್ಸ್.... ಇನ್ನು 15 ವರ್ಷಗಳಲ್ಲಿ 3 ನೇ ಪ್ರಪಂಚ ಯುದ್ಧ ಖಂಡಿತವೆಂದು ವಾಲೆಸರ ಭವಿಷ್ಯಜ್ಞಿ. ತ

ಂ ಂ

ಲಂಡನ್.... ರಕಡಕುಮೊರಿ, ಎಲಿಜಬೆತ್‌ರವರ ವಿವಾಹದಲ್ಲಿ ಬಂದ ಉಡುಗೆರೆ ನಲಕ್ಷ ಪೌಂಡು ಮೊರಿದೆ

ಪಕ್ಷಪಾತ ಪಾಪ

ಮೈಸೂರು ಇಂಟರ್ಮೀಡಿಯೆಟ್ ಕಾಲೇಜು ಸಂಘದವರು ಸಚಿವ ಭಾಷ್ಯಂರನ್ನು ಕರೆದು ತಮ್ಮ ಸಂಘದ ಅಭಿಭಾಷಣ ಮಾಡಿಸಿಕೊಂಡರು. ತಿಂಡಿ ತಿನ್ನಿಸಿದರು. ಪತ್ರಿಕೆಯವರ ಪೈಕಿ ತಮಗೆ ಬೇಕಾದ ಒಬ್ಬಿಬ್ಬರಿಗೆನ್ನೇ ಕರೆದಿದ್ದರು. ಇದ್ಯಾಕೀ ಪಕ್ಷಪಾತ? ಈ ಕಾಲದಲ್ಲೂ ಇಂಥಾ ಪಾಪ ಕಟ್ಟಿಕೊಳ್ಳೋದೆ? ಎಲ್ಲಾ ಪತ್ರಿಕಾ ಪ್ರತಿನಿಧಿಗಳನ್ನೂ ಕರೆದಿದ್ದರೆ ಎಷ್ಟು ಗೌರವ ಘನತೆ ಹೆಚ್ಚುತ್ತಿತ್ತು. ಈ ವಿದ್ಯೆ ನಾಳೆ ಹೊತ್ತಿಗೆ ಅಳಿಸಿ ಹೋಗಲಿ.

ಸತ್ಯವಾದಿ
ದಿನಪತ್ರಿಕೆ. ತಿಂಗಳಿಗೆ ಆರಾಣೆ

ಶಕ್ತಿಸುಧಾ
ಶಕ್ತಿಹೀನತೆಗೆ ಸಂಜೀವನ

Edited, Printed and Publishd by M S Krishna Rao at the Satyavadi Press Chamaraja Agahar Myrsore.

Woodlands
ಯಶಸ್ವಿ 4 ನೇ ವಾರ
ಅಶೋಕಕುಮಾರ್
ವೀರಾ, ಪ್ಯಾರೊ, ಪಾತ್ರವಹಿಸಿರುವ
ಪಿಕಾರಿ
(ಅಮೋಘ ಹಿಂದಿ ಚಿತ್ರ)

Save the Cow
ಗೋ ವಧೆ ನಿಲ್ಲಲಿ

At Opera
From 20-11-47
ಮಾಲಿತಿ — ಶಿವಭಾಗ್ಯಂ
ಎಸ್. ಎ. ಸುಬ್ಬಯ್ಯ — ನಂಬಿಯಾರ್
ಪಾತ್ರವಹಿಸಿರುವ
ಕಂಜನ್
ತಮಿಳು ಚಿತ್ರ — ಇದರ ಜೊತೆಯಲ್ಲಿ ಕೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ಮತ್ತು ಮಹಾತ್ಮಾ ಗಾಂಧಿಯವರಸಳನ ಯಾತ್ರೆ ಫಿಲಿಂ ಸಹಾ ತೋರಿಸಲಾಗುತ್ತೆ.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —
ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು
ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಐಟಿಯಾಲ್
ಟ್ರೇಡ್ ITL ಮಾರ್ಕ್
ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಹಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.
ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.
ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.
— ತಯಾರಿಕರು —
The Mysore Industrial & Testing Laboratory Ltd..
Malleswaram P. O. Bangalore

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾಗಿದೆ. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಿತರ ಸಮಾರಂಭಗಳಲ್ಲಿಯೂ [illegible] ದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್
(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI
SUDHA
A Superb TONIC